## ಯಲಹಂಕ – ಕಾಂಗ್ರೈ ಕೋಟೆಯಲ್ಲಿ ಬಿರುಕು

ಬೆಂಗಳೂರಿನ ಇತಿಹಾಸದಲ್ಲಿ ಮಹತ್ತರವಾದ ಸ್ಥಾನವನ್ನು ಪಡೆದಿದೆ. ಬೆಂಗಳೂರಿನ ಸಂಸ್ಥಾಪಕರಾದ ಶ್ರೀಕೆಂಪೇಗೌಡರು ಕಾಲದಲ್ಲಿ ಯಲಹಂಕನಾಡು ಬೆಂಗಳೂರಿನ ರಾಜಧಾನಿಯಾಗಿದ್ದಿತು. ಇಂತಹ ವಿಶಿಷ್ಟವಾದ ಹಿನ್ನೆಲೆಯುಳ್ಳ ಯಲಹಂಕ ಕ್ಷೇತ್ರದ ಜನತೆಯು ಮುಂದಿನ ಡಿಸೆಂಬರ್ ೧೧ರಂದು ತನ್ನ ನೂತನ ಶಾಸಕನನ್ನು ಆಯ್ಕೆ ಮಾಡಲು ಮತದಾನ ಮಾಡಲಿದೆ.

ಯಲಹಂಕ ಕ್ಷೇತ್ರವು ಐತಿಹಾಸಿಕ ಹಿನ್ನೆಲೆಯಿಂದಷ್ಟೇ ಅಲ್ಲ, ಈ ಬಾರಿಯ ವಿಧಾನಸಭಾ ಚುನಾವಣೆಗಳಲ್ಲೂ ವಿಶಿಷ್ಟವಾದ ಸ್ಥಾನ ಪಡೆದಿದೆ. ಈ ಕ್ಷೇತ್ರವು ಕರ್ನಾಟಕದಲ್ಲಿರುವ ವಿಧಾನಸಭಾ ಕ್ಷೇತ್ರಗಳ ಪೈಕಿ ಎರಡನೇ ಅತಿದೊಡ್ಡ ಮತದಾರ ಕ್ಷೇತ್ರವಾಗಿದೆ. ಪರಿಸಿಷ್ಟ ಜಾತಿ ಹಾಗೂ ಪಂಗಡದ ಜನಾಂಗದ ಅಭ್ಯರ್ಥಿಗಳಿಗೆ ಮೀಸಲಾಗಿರುವ ಈ ಕ್ಷೇತ್ರವು , ಮೀಸಲು ಕ್ಷೇತ್ರಗಳ ಪೈಕಿ ಭಾರತದಲ್ಲೇ ಅತಿ ದೊಡ್ಡ ಕ್ಷೇತ್ರವಾಗಿರುವುದು ಒಂದು ವಿಶಿಷ್ಟ ಸಂಗತಿ. ೩ ಲಕ್ಷದ ೫೭ ಸಾವಿರ ಮುನ್ನೂರು ಮತದಾರರು ಈ ಕ್ಷೇತ್ರದಲ್ಲಿ ಮತ ಚಲಾಯಿಸಲಿದ್ದು, ಇವರಲ್ಲಿ ೧,೯೦,೩೮ ಪುರುಷ ಮತದಾರರು ಹಾಗೂ ೧,೬೬,೯೧೧ ಮಹಿಳಾ ಮತದಾರರಿದ್ದಾರೆ. ಕರ್ನಾಟಕದಲ್ಲಿ ಉತ್ತರಹಳ್ಳಿ ಕ್ಷೇತ್ರವೊಂದೇ ೬,೨೭,೯೦೩ ಮತದಾರರನ್ನು ಹೊಂದಿದ್ದು ಯಲಹಂಕ ಕ್ಷೇತ್ರಕ್ಕಿಂತ ಒಟ್ಟು ಮತದಾರರ ಸಂಖ್ಯೆಯಲ್ಲಿ ಮುಂದಿದೆ. ಯಲಹಂಕ ಕ್ಷೇತ್ರದಲ್ಲಿ ೯೫,೦೦೦ ಮುಸ್ಲಿಂ ಮತದಾರರು ಹಾಗೂ ಸುಮಾರು ಅಷ್ಟೇ ಸಂಖ್ಯೆಯ ಪರಿಶಿಷ್ಟ ಜಾತಿ–ಪಂಗಡಗಳ ಮತದಾರರಿರುವುದು ಈ ಕ್ಷೇತ್ರದ ವಿಶೇಷ. ಒಟ್ಟು ४೬೦ ಮತಗಟ್ಟೆಗಳು ಈ ಕ್ಷೇತ್ರದಲ್ಲಿದ್ದು, ಇದು ಕಳೆದ ಬಾರಿಗಿಂತ ೧೨೬ ಮತಗಟ್ಟೆಗಳಷ್ಟೆ ಹೆಚ್ಚಾಗಿದೆ.

ಪ್ರತಿಷ್ಠಿತ ಚುನಾವಣಾ ಕಣವಾಗಿರುವ ಯಲಹಂಕ ಕ್ಷೇತ್ರಕ್ಕೆ ಈ ಬಾರಿ ಬಹುತೇಕ ಎಲ್ಲಾ ಪಕ್ಷಗಳೂ ತಮ್ಮ ಅಭ್ಯರ್ಥಿಗಳನ್ನ್ ನಿಲ್ಲಿಸಿವೆ. ಆದರೆ, ೧೬ ಅಭ್ಯರ್ಥಿಗಳಿರುವ ಈ ಕ್ಷೇತ್ರದಲ್ಲಿ ಮುಖ್ಯ ಹೋರಾಟವಿರುವುದು ಬಿಜೆಪಿ ಮತ್ತು ಕಾಂಗ್ರೈ ನಡುವೆ ಮಾತ್ರ. ಕಾಂಗ್ರೈ ಪಕ್ಷವು ಹಾಲಿ ಶಾಸಕ ಹಾಗೂ ಮಾಜಿ ಸಚಿವ ದಿವಂಗತ ಶ್ರೀ ಬಿ.ಬಸಲಿಂಗಪ್ಪನವರ ಪುತ್ರ ಪ್ರಸನ್ನಕುಮಾರರವರನ್ನು ನಿಲ್ಲಿಸಿದೆ. ಕಾರ್ಮಿಕ ನಾಯಕರೂ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಬಿಜೆಪಿ ಅಧ್ಯಕ್ಷರಾಗಿರುವ ಸಿ.ಮುನಿಯಪ್ಪನವರು ಬಿಜೆಪಿ ಪರವಾಗಿ ಸ್ಪರ್ಧಿಸುತಿದ್ದಾರೆ. ಜನತಾದಳದ ಪರವಾಗಿ ಜಯಪ್ರಕಾಶನಾರಾಯಣ್ ರವರು, ಕೆಸಿಪಿ ವತಿಯಿಂದ ಬಿ.ನಾರಾಯಣಸ್ವಾಮಿಯವರು ಹಾಗೂ ಬಿ.ಎಸ್.ಪಿ.ಯಿಂದ ಮುನಿಯಪ್ಪನವರು ಚುನಾವಣಾ ಕಣದಲ್ಲಿದ್ದಾರೆ.

ಕರ್ನಾಟಕ ರಾಜ್ಯದ ಮಾಜಿ ಕಂದಾಯ ಸಚಿವರಾಗಿದ್ದ ಬಿ.ಬಸಲಿಂಗಪ್ಪನವರ ಹಠಾತ್ ನಿಧನದಿಂದ ತೆರವಾದ ಯಲಹಂಕ ವಿಧಾನಸಭಾ ಸ್ಥಾನಕ್ಕೆ ಕಳೆದ ವರ್ಷದ ಮೇ ತಿಂಗಳಲ್ಲಿ ಉಪಚುನಾವಣೆ ನಡೆಯಿತು. ಅಲ್ಲಿಯವರೆಗೂ ಕಾಂಗ್ರೆಸ್ ಪಕ್ಷದ ಭದ್ರಕೋಟೆಯಾಗಿದ್ದ ಯಲಹಂಕ ಕ್ಷೇತ್ರವು ಈ ಉಪಚುನಾವಣೆಯಲ್ಲಿ ಸೋಲಿನ ಸನಿಹಕ್ಕೆ ಬಂದಿತ್ತು. ಕೇವಲ ೫೧೨ ಮತಗಳ ಅಂತರದಲ್ಲಿ ಕಾಂಗ್ರೈ ವಿಜಯ ಸಾಧಿಸಿತು. ಮತಗಳ ಏಣಿಕೆಯಲ್ಲಿ ವಂಚನೆಯಾಗಿದೆ ಎಂದು ಬಿಜೆಪಿ ದೂರಿತ್ತಾದರೂ ಪ್ರಸನ್ನಕುಮಾರರು ಶಾಸಕರಾದರು.

ಯಲಹಂಕ ವಿಧಾನಸಭಾ ಸ್ಥಾನವು ಮೊದಲಿಂದಲೂ ಕಾಂಗ್ರೈ ಪಕ್ಷದ ಭದ್ರಸ್ಥಾನವಾಗಿದೆ. ೧೯೭೨ ರಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಸೂರ್ಯ ನಾರಾಯಣರಾವ್ ಹಾಗೂ ೧೯೮೩ರಲ್ಲಿ ಜನತಾಪಕ್ಷದ ಶ್ರೀನಿವಾಸರವರು ಜಯಗಳಿಸಿದ್ದು ಬಿಟ್ಟರೆ ಇನ್ನೆಲ್ಲಾ ಚುನಾವಣೆಗಳಲ್ಲೂ ಕಾಂಗ್ರೆಸ್ ಪಕ್ಷವೇ ಇಲ್ಲಿ ಜಯಗಳಿಸಿದೆ. ಈ ಬಾರಿಯ ಚುನಾವಣೆಯಲ್ಲಿ ಸ್ಪರ್ಧಿಸಲು ಕಾಂಗ್ರೈ ಅಭ್ಯರ್ಥಿಯ ಆಯ್ಕೆಯು ಕಾಂಗ್ರೆಸ್ ಹೈಕಮಾಂಡಗೆ ನುಂಗಲಾರದ ತುತ್ತಾಗಿ ಪರಿಣಮಿಸಿತು. ಹಾಲಿ ಶಾಸಕ ಪ್ರಸನ್ನಕುಮಾರರಿಗೆ ಪಾರ್ಟಿ ಟಿಕೆಟ್

ನೀಡದಂತೆ ಪಕ್ಷದ ವರಿಷ್ಠ ನೇತಾರನೇಕರು ಮುಕ್ತವಾಗಿ ವಿರೋಧ ವ್ಯಕ್ತಪಡಿಸಿದ್ದರು. ಹೀಗಿದ್ದೂ ಪ್ರಸನ್ನಕುಮಾರರಿಗೆ ಯಲಹಂಕದ ಟಿಕೆಟ್ ನೀಡಿರುವುದು ಅನೇಕ ಪ್ರಮುಖ ನಾಯಕರಿಗೆ ಬೇಸರ ತಂದಿದೆ. ಸಾಪ್ತಾಹಿಕವೊಂದರಲ್ಲಿ ಇತ್ತೀಚಿಗಷ್ಟೇ ಅವರ ವಿರುದ್ಧ ಆರೋಪಗಳ ಪಟ್ಟಿ ಪ್ರಕಟವಾಗಿದ್ದು ಪ್ರಸನ್ನಕುಮಾರರ ಜನಪ್ರಿಯತೆಯನ್ನು ಇನ್ನಷ್ಟು ಕುಗ್ಗಿಸಿದೆ. ಅವರ ಸಹೋದರರಾದ ಶರತ್ ಚಂದ್ರರೇ ಕಾಂಗ್ರೈ ಬಂಡಾಯ ಅಭ್ಯರ್ಥಿಯಾಗಿ ಈ ಬಾರಿ ಸ್ಪರ್ಧಿಸುತ್ತಿದ್ದಾರೆ. ಹಾಗೂ ಹೆಬ್ಬಾಳದ ಮರಿಯಪ್ಪನವರೂ ಇಲ್ಲಿ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದಾರೆ.

ಕಳೆದ ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಪರಾಭವಗೊಂಡ ಶಿವಲಿಂಗಯ್ಯನವರ ಬದಲಾಗಿ ಕಾರ್ಮಿಕ ನಾಯಕರಾದ ಸಿ.ಮುನಿಯಪ್ಪನವರಿಗೆ ಈ ಬಾರಿ ಬಿಜೆಪಿ ಟಿಕೆಟ್ ನೀಡಲಾಗಿದೆ. ಆರೆಸ್ಸೆಸ್ ಗರಡಿಯಲ್ಲಿ ಪಳಗಿರುವ ಮುನಿಯಪ್ಪನವರು ಒಬ್ಬ ನಿಷ್ಠಾವಂತ ಹಾಗೂ ಪ್ರಾಮಾಣಿಕ ಕಾರ್ಯಕರ್ತರು. ಭಾರತ್ ಎಲೆಕ್ಟ್ರಾನಿಕ್ಸ್ ಸಂಸ್ಥೆಯಲ್ಲಿ ನೌಕರರಾಗಿರುವ ಸಿ.ಮುನಿಯಪ್ಪನವರು ಭಾರತ್ ಮಜ್ದೂರ್ ಸಂಘದ ಮುಖಂಡರೂ ಆಗಿದ್ದರು. ಭಾರತ್ ಎಲೆಕ್ಟ್ರಾನಿಕ್ಸ್ ಸಂಸ್ಥೆಯ ಕಾರ್ಮಿಕ ಕಲ್ಯಾಣ ನಿಧಿಯ ನಿರ್ವಾಕರಾಗಿಯೂ ಇವರು ಸೇವೆ ಸಲ್ಲಿಸಿದ್ದಾರೆ. ಆರೆಸ್ಸಸ್ ಕಾರ್ಯಕರ್ತರಾಗಿ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲಾ ಅಧ್ಯಕ್ಷರಾಗಿ ಇವರು ಯಲಹಂಕ ಕ್ಷೇತ್ರದಲ್ಲಿ ಅನೇಕ ಬಾರಿ ಪ್ರವಾಸ ಮಾಡಿದ್ದಾರೆ. ಇಲ್ಲಿನ ಎಲ್ಲಾ ಕಾರ್ಯಕರ್ತರಿಗೂ ಚಿರಪರಿಚಿತರಾಗಿರುವ ಮುನಿಯಪ್ಪನವರು ಯುವಕರಿಗಂತೂ ಅಚ್ಚುಮೆಚ್ಚಾಗಿದ್ದಾರೆ.

ಕಾಂಗ್ರೈ-ಬಿಜೆಪಿ ನಡುವೆ ಈ ಕ್ಷೇತ್ರದಲ್ಲಿ ತೀವ್ರ ಸೆಣಸಾಟವಿದ್ದರೂ ಜನತಾದಳವು ಅನಿರೀಕ್ಷಿತ ಫಲಿತಾಂಶ ಒದಗಿಸಬಹುದು ಎಂದು ನಂಬಲಾಗಿದೆ. ಜಯಪ್ರಕಾಶ್ ನಾರಾಯಣರವರು ಅಂಬೇಡ್ಕರ್ ವೈದ್ಯಕೀಯ ಮಹಾವಿದ್ಯಾಲಯದ ಮಾಜಿ ಛೇರ್ಮನ್ನರು, ಅತಿ ಹೆಚ್ಚು ಮುಸ್ಲಿಂ ಮತದಾರರಿರುವ ಈ ಕ್ಷೇತ್ರದಲ್ಲಿ ಜನತಾದಳವು ಒಳ್ಳೆಯ ಸಾಧನೆ ಮಾಡುವುದೆಂದು ದಳದ ನಾಯಕರು ನಿರೀಕ್ಷಿಸುತ್ತಿದ್ದಾರೆ. ಕೆಸಿಪಿ ಅಭ್ಯರ್ಥಿ ಟಿ.ನಾರಾಯಣಸ್ವಾಮಿಯವರು ಮೊದಲು ಜನತಾಪಕ್ಷದಲ್ಲಿದ್ದು ನಂತರ ಕಾಂಗ್ರೈ ಪಕ್ಷವನ್ನು ಸೇರಿ ಇತ್ತೀಚಿಗಷ್ಟೇ ಕೆಸಿಪಿಯನ್ನು ಸೇರಿದವರು. ಕೆಸಿಪಿಯು ಚುನಾವಣೆ ಗೆಲ್ಲದಿದ್ದರೂ ಕಾಂಗ್ರೆಸ್ ಗೆ ಹೋಗುವ ಮತಗಳನ್ನು ತನ್ನದಾಗಿಸಿಕೊಳ್ಳುವುದೆಂದು ನಿರೀಕ್ಷಿಸಲಾಗಿದೆ. ಕಾಂಗ್ರೆಸ್ ಪಕ್ಷದಲ್ಲಿರುವಂತೆ ಬಿ.ಎಸ್.ಪಿ ಹಾಗೂ ಕೆ.ಸಿ.ಪಿ.ಯಿಂದಲೂ ಬಂಡಾಯ ಅಭ್ಯರ್ಥಿಗಳು ಚುನಾವಣೆ ಸ್ಪರ್ಧಿಸುತ್ತಿದ್ದಾರೆ.

ಕರ್ನಾಟಕದಲ್ಲಿ ಇನ್ನಿತರ ಸ್ಥಾನಗಳಂತೆ ಯಲಹಂಕ ಕ್ಷೇತ್ರದಲ್ಲೂ ಚುನಾವಣಾ ಬಿಸಿ ಎಲ್ಲೂ ಕಾಣುತ್ತಿಲ್ಲ. ಅಲ್ಲೊಂದು ಇಲ್ಲೊಂದು ಬ್ಯಾನರ್ ಹಾಗೂ ಬಾವುಟಗಳನ್ನು ಬಿಟ್ಟರೆ ಮಿಕ್ಕಂತೆ ಯಾವುದೇ ದುಂದುವೆಚ್ಚದ ಚುನಾವಣಾ ಪ್ರಚಾರವನ್ನು ಯಾವುದೇ ಪಕ್ಷದ ಅಭ್ಯರ್ಥಿಗಳು ಮಾಡುತ್ತಿಲ್ಲ. ಆದರೆ ಮನೆಮನೆಗೂ ಹೋಗಿ ಚುನಾವಣಾ ಪ್ರಚಾರವನ್ನು ಮೊಟ್ಟಮೊದಲು ಬಿಜೆಪಿ ಪ್ರಾರಂಭಿಸಿದೆ. ಬಿಜೆಪಿ ಅಭ್ಯರ್ಥಿ ಸಿ.ಮುನಿಯಪ್ಪನವರು ಈ ದೊಡ್ಡ ವಿಧಾನಸಭಾ ಕ್ಷೇತ್ರದ ಎಲ್ಲ ಭಾಗಗಳನ್ನೂ ಭೇಟಿ ಮಾಡುತ್ತಿದ್ದಾರೆ. ಕಾಂಗ್ರೈ ಅಭ್ಯರ್ಥಿ ಪ್ರಸನ್ನಕುಮಾರರ ಧರ್ಮಪತ್ನಿಯವರು ಮನೆಮನೆಗೂ ಭೇಟಿ ನೀಡಿ ತಮ್ಮ ಪತಿಗೆ ಮತ ನೀಡುವಂತೆ ಕೋರುತ್ತಿದ್ದಾರೆ. ಆದರೂ ಕೆಂಪೇಗೌಡರ ರಾಜಧಾನಿಯಾದ ಈ ಯಲಹಂಕ ನಾಡಿನಲ್ಲಿ ವಿಜಯಮಾಲೆ ಯಾರ ಕೊರಳಿಗೆ ಬೀಳಲಿದೆಯೆಂಬುದನ್ನು ಕಾದು ನೋಡಬೇಕಾಗಿದೆ.

Nov 20th 1994 Hosa Diganta <u>Yalahanka-Cogress koteyalli Beruku.</u>